2017 ಕ.ತೀ.ವ. 1817

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್

## ಯುನೈಟೆಡ್ ಇಂಡಿಯಾ ಇನ್‌ಷೂರೆನ್ಸ್ ಕಂ. ಲಿಮಿಟೆಡ್ –ವಿರುದ್ಧ– ಶ್ರೀಮತಿ ರತ್ನ ಮತ್ತು ಇನ್ನೊಬ್ಬರು*

**ಮೋಟಾರು ವಾಹನಗಳ ಅಧಿನಿಯಮದ 173(1)ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲನೇ ಅಪೀಲು.**

**ಅಪಘಾತಗಳ ಕ್ಲೇಮಿನಲ್ಲಿ ಅಪಘಾತದ ದಿನಾಂಕದಿಂದ ವಿಮೆ ಮಾಡಲಾದ ವಾಹನದ ಚಾಲಕನು ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲವೆಂಬ ಪೊಲೀಸ್ ಆರೋಪ ಪಟ್ಟಿಯು ಸಲ್ಲಿಸಿರುವುದರಿಂದ ಸದರಿ ಕ್ಲೇಮಿನಲ್ಲಿ ವಿಮಾ ಕಂಪನಿಯನ್ನು ನಷ್ಟ ಪರಿಹಾರದ ಹೊಣೆಗಾರಿಕೆಯಿಂದ ಹೊರತುಪಡಿಸಬೇಕೆಂದು ವಿಮಾ ಕಂಪನಿಯು ಸಲ್ಲಿಸಿದ ಅಪೀಲಾಗಿದೆ.**

**ವಿಮೆ ಮಾಡಲಾದ ವಾಹನದ ಚಾಲಕನು, ಅಪಘಾತದ ದಿನಾಂಕದಂದು ಚಾಲನಾ ಪರವಾಗಿ ಹೊಂದಿಲ್ಲವೆಂದು ಅಭಿಪ್ರಾಯಪಡುವುದಕ್ಕೆ ಪೊಲೀಸ್ ಆರೋಪ ಪಟ್ಟಿಯನ್ನು ಅವಲಂಬಿಸಬಹುದೇ?**

**ಈ ಪ್ರಶ್ನೆಯು, ನಿರ್ಧರಣೆಗಾಗಿ ಈ ಅಪೀಲಿನಲ್ಲಿ ಉದ್ಭವಿಸಿದೆ ಮತ್ತು ಅದಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಪಘಾತದ ದಿನಾಂಕದಂದು ವಿಮೆ ಮಾಡಲಾದ ವಾಹನದ ಚಾಲಕನು, ಚಾಲನಾ ಪರವಾನಗಿ ಹೊಂದಿರುವುದಿಲ್ಲವೆಂಬುದಕ್ಕೆ ಮೊಕದ್ದಮೆಯಷ್ಟರ ಮಟ್ಟಿಗೆ ದಾಖಲೆ ಮೇಲೆ ಸ್ಪಷ್ಟವಾದ**

* ಸಂಕೀರ್ಣ ಮೊದಲನೇ ಅಪೀಲು ಸಂ.9308/2011 (ಎಂವಿ),
ದಿನಾಂಕ: 25ನೇ ನವೆಂಬರ್, 2015.

**ಸಾಕ್ಷ್ಯವಿರಬೇಕು. ಅಪಘಾತದ ದಿನಾಂಕದಂದು ವಿಮೆ ಮಾಡಲಾದ ವಾಹನದ ಚಾಲಕನು, ಚಾಲನಾ ಪರವಾನಗಿ ಹೊಂದಿರುವುದಿಲ್ಲವೆಂದು ಅಭಿಪ್ರಾಯಪಡುವುದಕ್ಕೆ ಪೊಲೀಸ್ ಆರೋಪ ಪಟ್ಟಿಯು ಸಾಕ್ಷ್ಯವಾಗದು.**

**ಮೇಲ್ಕಂಡ ಅಭಿಪ್ರಾಯದ ದೃಷ್ಟಿಯಿಂದ, ನ್ಯಾಯಾಧಿಕರಣದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ನನಗೆ ಯಾವುದೇ ಕಾನೂನು ದುರ್ಬಲತೆ ಕಂಡು ಬರುವುದಿಲ್ಲ. ಈ ಅಪೀಲಿನಲ್ಲಿ ಯಾವುದೇ ಅರ್ಹತೆಯಿಲ್ಲದಿರುವುದರಿಂದ ವಜಾಗೊಳಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ:*** **ಪ್ಯಾರಾದಲ್ಲಿ**

*1. (1998) 9 ಎಸ್‌ಸಿಸಿ 160*
*ರುಕ್ಮಿಣಿ -ವಿರುದ್ಧ- ನ್ಯೂ ಇಂಡಿಯಾ ಅಶುರೆನ್ಸ್ ಕಂ. (ಉಲ್ಲೇ) 6*

ಅಪೀಲುದಾರರ ಪರ : ಶ್ರೀ ಜನಾರ್ಧನ ರೆಡ್ಡಿ - ವಕೀಲರು ;
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಶ್ರೀಪಾದ ವಿ. ಶಾಸ್ತ್ರಿ - ವಕೀಲರು,
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಸತೀಶ - ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್ (ಮೌಖಿಕ):**

ವಿಮೆ ಮಾಡಲಾದ ವಾಹನದ ಚಾಲಕನು, ಅಪಘಾತದ ದಿನಾಂಕದಂದು ಚಾಲನಾ ಪರವಾಗಿ ಹೊಂದಿಲ್ಲವೆಂದು ಅಭಿಪ್ರಾಯಪಡುವುದಕ್ಕೆ ಪೊಲೀಸ್ ಆರೋಪ ಪಟ್ಟಿಯನ್ನು ಅವಲಂಬಿಸಬಹುದೇ?

ಈ ಪ್ರಶ್ನೆಯು, ನಿರ್ಧರಣೆಗಾಗಿ ಈ ಅಪೀಲಿನಲ್ಲಿ ಉದ್ಭವಿಸಿದೆ ಮತ್ತು ಅದಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

2. ಈ ಅಪೀಲನ್ನು, ವಿಮಾ ಕಂಪನಿಯಿಂದ ದಾಖಲು ಮಾಡಲಾಗಿದೆ. ಪ್ರಶ್ನಿತ ತೀರ್ಪಿನ ಮೂಲಕ, ನ್ಯಾಯಾಧಿಕರಣವು, ಸಂಖ್ಯೆ. ಕೆಎ-03 ಇಸಿ-6410ನ್ನು

ಹೊಂದಿದ ಮೋಟಾರು ಸೈಕಲ್ ಸವಾರನ ನಿರ್ಲಕ್ಷ್ಯ ಚಾಲನೆಯಿಂದ ದಿನಾಂಕ 31.01.2009 ರಂದು ಸಂಭವಿಸಿದ ಮೋಟಾರು ವಾಹನ ಅಪಘಾತದಲ್ಲಿ ಆಕೆಗೆ ಉಂಟಾದ ಗಾಯಗಳಿಗಾಗಿ, ಕ್ಲೇಮುದಾರರಿಗೆ ವಾರ್ಷಿಕ ಶೇಕಡಾ 6 ರಂತೆ ಅದರ ಮೇಲೆ ಬಡ್ಡಿಯೊಂದಿಗೆ 60,500/- ರೂಪಾಯಿಗಳ ಪರಿಹಾರವನ್ನು ನೀಡಿದೆ.

3. ಪ್ರಸ್ತುತ ಅಪೀಲಿನಲ್ಲಿ ವಿಮಾದಾರನು, ವಿಮೆ ಮಾಡಲಾದ ಮೋಟಾರು ಸೈಕಲ್ ಚಾಲನೆ ಮಾಡಲು ಚಾಲನಾ ಪರವಾನಗಿ ಹೊಂದಿಲ್ಲದಿರುವ ವ್ಯಕ್ತಿಯನ್ನು ಅನುಮತಿಸಿರುವುದರಿಂದ ವಿಮಾ ಪಾಲಿಸಿಯ ಷರತ್ತನ್ನು ಉಲ್ಲಂಘಿಸಿದಂತಾಗಿದೆ. ಆದ್ದರಿಂದ, ವಿಮಾ ಕಂಪನಿಯ ವಿರುದ್ಧವಾಗಿ ಸಲ್ಲಿಸಲಾದ ಕ್ಲೇಮು ಅರ್ಜಿಯನ್ನು ವಜಾಗೊಳಿಸಬೇಕೆಂಬುದು ಅಪೀಲುದಾರ ವಿಮಾ ಕಂಪನಿಯ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಒತ್ತಿ ಹೇಳಿದ ಏಕೈಕ ವಾದವಾಗಿದೆ. ವಿಮೆ ಮಾಡಲಾದ ಮೋಟಾರು ಸೈಕಲ್‌ನ ಸವಾರನು ಚಾಲನಾ ಪರವಾನಗಿ ಹೊಂದಿಲ್ಲದಿರುವುದಕ್ಕಾಗಿ ಪೊಲೀಸ್‌ರಿಂದ ಕ್ರಮ ಜರುಗಿಸಲಾಗಿದ್ದು, ಆದ್ದರಿಂದ, ಅವನು, ಅಪಘಾತದ ದಿನಾಂಕದಂದು ಚಾಲನಾ ಪರವಾನಗಿ ಹೊಂದಿರುವುದಿಲ್ಲವೆಂದು ಅಭಿಪ್ರಾಯಪಡಬೇಕೆಂದು ಅವರು ನಿವೇದಿಸಿದ್ದಾರೆ.

4. ಈ ಮೇಲೆ ಹೇಳಲಾದ ವಾದವನ್ನು, ನ್ಯಾಯಾಧಿಕರಣದ ಮುಂದೆ ಸಹ ಒತ್ತಿ ಹೇಳಲಾಗಿತ್ತು ಮತ್ತು ನ್ಯಾಯಾಧಿಕರಣವು, ಈ ಮುಂದಿನ ಕಾರಣದೊಂದಿಗೆ ಅದನ್ನು ತಿರಸ್ಕರಿಸಿತ್ತು:

> *"18. ........................................................*
> *ಮೋಟಾರು ಸೈಕಲ್ ಸವಾರನು, ಆರೋಪಪಟ್ಟಿಯನ್ನು ಹಾಜರುಪಡಿಸಿದ ಕಾರಣ ಮಾತ್ರದಿಂದಲೇ ಚಾಲನಾ ಪರವಾನಗಿ ಹೊಂದಿಲ್ಲವೆಂದು ಅರ್ಥವಲ್ಲ. ಈ ಸನ್ನಿವೇಶದಲ್ಲಿ, ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಅವಲಂಬಿತವಾಗಿರುವ ಆ ನಿರ್ಣಯವು ಪ್ರಸ್ತುತ ಪ್ರಕರಣದ ಸಂಗತಿಗಳಿಗೆ ಅನ್ವಯಿಸುವುದಿಲ್ಲ.*

> *ಈ ನ್ಯಾಯಾಲಯದ ಮುಂದೆ ದಸ್ತಾವೇಜಿಯ ಸಾಕ್ಷ್ಯವನ್ನು ಹಾಜರುಪಡಿಸದಿರುವುದರಿಂದ ಪ್ರತ್ಯರ್ಜಿದಾರನು, ಪ್ರತಿವಾದವನ್ನು ರುಜುವಾತು ಪಡಿಸಲು ವಿಫಲನಾಗಿದ್ದಾನೆ. ಹಾಗೆಯೇ, ಪ್ರತ್ಯರ್ಜಿದಾರನಿಂದ ಎತ್ತಲಾದ ವಾದವು, ಕಾನೂನಿನ ಅಡಿಯಲ್ಲಿ ಸಮರ್ಥನೀಯವಾಗಿರುವುದಿಲ್ಲ. ಅಂತೆಯೇ ವಿಮಾ ಕಂಪನಿಯು, ಪರಿಹಾರವನ್ನು ಪಾವತಿಸುವುದಕ್ಕೆ ಹೊಣೆಯಾಗುತ್ತದೆ."*
>
> (ಒತ್ತು ನೀಡಲಾಗಿದೆ)

5. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ಈ ಅಪೀಲಿಗೆ ಪೂರಕವಾಗಿ ಎಂಎಫ್ಎ ಸಂಖ್ಯೆ 9169 ಮತ್ತು 11116/2005ಗಳಲ್ಲಿ ದಿನಾಂಕ 30.11.2010ರಂದು ಈ ನ್ಯಾಯಾಲಯದ ವಿಭಾಗೀಯ ಪೀಠದಿಂದ ನೀಡಲಾದ ವರದಿ ಮಾಡದ ತೀರ್ಮಾನಗಳ ಮೇಲೆ ಅವಲಂಬಿತರಾಗಿದ್ದಾರೆ. ಅವರು ಕೋರಿದ, ಅದರಲ್ಲಿನ 7 ಮತ್ತು 8 ಕಂಡಿಕೆಗಳ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ ಮತ್ತು ಸದರಿ ಪ್ರಕರಣದಲ್ಲಿ, ವಿಮಾ ಕಂಪನಿಯು, ವಿಮೆ ಮಾಡಲಾದ ವಾಹನದ ಚಾಲಕನು, ಚಾಲನಾ ಪರವಾನಗಿ ಹೊಂದಿಲ್ಲದಿರುವುದರಿಂದ ಪೋಲೀಸ್‌ರಿಂದ ಕ್ರಮ ಜರುಗಿಸಲಾಗಿದೆಯೆಂಬ ಕಾರಣದ ಮೇಲೆ ಹೊಣೆಯನ್ನು ಮಾಫಿ ಮಾಡಲಾಗಿದೆಯೆಂದು ವಾದ ನಿವೇದಿಸಿದ್ದಾರೆ.

6. ಎತ್ತಲಾದ ವಾದದ ಸಂದರ್ಭದಲ್ಲಿ, ***ರುಕ್ಮಣಿ –ವಿರುದ್ಧ– ನ್ಯೂ ಇಂಡಿಯಾ ಅಶುರೆನ್ಸ್ ಕಂ*** [1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ಉಲ್ಲೇಖಿಸುವುದು ಸುಸಂಬದ್ಧವಾಗಿದ್ದು, ಸರ್ವೋಚ್ಚ ನ್ಯಾಯಾಲಯ ಅದರಲ್ಲಿರುವಂತೆ, ಈ ಮುಂದಿನಂತೆ ಹೇಳಲಾಗಿದೆ.

> *"3. ವಾದಕ್ಕೆ ಪೂರಕವಾಗಿ ವಿಮಾ ಕಂಪನಿಯು ಹಾಜರುಪಡಿಸಲಾದ ಏಕಮಾತ್ರ ಸಾಕ್ಷ್ಯ ಮಾತ್ರ ನಮಗೆ*

1. (1998) 9 ಎಸ್‌ಸಿಸಿ 160

ಕಂಡು ಬಂದಿದೆ. ಇದು, ಅಪಘಾತವನ್ನು ತನಿಖೆ ಮಾಡಿದ ಪೊಲೀಸ್ ಇನ್ಸ್‌ಪೆಕ್ಟರ್ ಸಾಕ್ಷ್ಯವಾಗಿದೆ. ತನ್ನ ಸಾಕ್ಷ್ಯದಲ್ಲಿ, ಪ್ರಾ.ಸಾ.1, ಆಗಿರುವ ಪೊಲೀಸ್ ಇನ್ಸ್‌ಪೆಕ್ಟರ್ ಅವರು ತನಿಖೆಯ ಮುಖ್ಯಸ್ಥನಾಗಿ, 1ನೇ ಪ್ರತ್ಯರ್ಜಿದಾರನು, ಮೇಲೆ ಹೇಳಿದ ಸ್ಕೂಟರ್‌ನ ಚಾಲನಾ ಪರವಾನಗಿಯನ್ನು ಹಾಜರುಪಡಿಸಿಲ್ಲವೆಂಬುದು 'ನನ್ನ ವಿಚಾರಣೆಯಿಂದ ಕಂಡು ಬಂದಿದೆಯೆಂದು ಹೇಳಿದ್ದಾರೆ. ನನ್ನ ಒತ್ತಾಯದ ತರುವಾಯವೂ ಸಹ 1ನೇ ಪ್ರತ್ಯರ್ಜಿದಾರನು, ಅವನು, ಅದನ್ನು, ಹೊಂದಿಲ್ಲದಿರುವುದರಿಂದ, ಪರವಾನಗಿಯನ್ನು ಹಾಜರುಪಡಿಸಿರುವುದಿಲ್ಲ' ವೆಂದು ಹೇಳಿದ್ದಾರೆ. ಅವನ ಪಾಟೀ ಸವಾಲಿನಲ್ಲಿ, ಮೋಟಾರು ವಾಹನಗಳ ಇನ್ಸ್‌ಪೆಕ್ಟರ್ ತನಿಖೆ ಮಾಡುವ ಅಗತ್ಯವಿದೆಯೆಂದು ಹೇಳಲಾಗಿದ್ದು, ಪರವಾನಗಿಯನ್ನು 1ನೇ ಪ್ರತ್ಯರ್ಜಿದಾರನು, ಅದು, ಅಗತ್ಯವಿಲ್ಲದಿದ್ದರೂ ಪರವಾನಗಿ ಹೊಂದಿರುವುದಿಲ್ಲವೆಂಬುದನ್ನು ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ಗೆ ತಿಳಿಸಿರುವುದಿಲ್ಲ. ನಮ್ಮ ಅಭಿಪ್ರಾಯದಲ್ಲಿ, ವಿಮಾ ಕಂಪನಿಯ ಮೇಲೆ ಹೊರಿಸಿರುವ ಭಾರವನ್ನು ವಿನಾಯಿತಿ ಗೊಳಿಸುವುದಕ್ಕೆ ಈ ಸಾಕ್ಷ್ಯವು ಸಾಕಷ್ಟಾಗುವುದಿಲ್ಲ. ಅದು, ವಾಹನದ ಚಾಲಕನಿಗೆ ಸಮನು ಮಾಡಿರುವುದಿಲ್ಲ. ರಸ್ತೆ ಸಾರಿಗೆ ಪ್ರಾಧಿಕಾರದಿಂದ ದಾಖಲೆಯನ್ನು ಸಹ ಹಾಜರುಪಡಿಸಿರುವುದಿಲ್ಲ. ಈ ಸಂದರ್ಭಗಳಲ್ಲಿ, ಮೋಟಾರು ವಾಹನಗಳ ಅಧಿನಿಯಮ, 1939ರ 96(2)(ಬಿ)(2)ರ ಪ್ರಕರಣದ ಅಡಿಯಲ್ಲಿ ಹೊರಿಸಿರುವ ಭಾರದಿಂದ ವಿಮಾ ಕಂಪನಿಗೆ, ವಿನಾಯಿತಿ ನೀಡಲಾಗುವುದಿಲ್ಲ. ಉಚ್ಚ ನ್ಯಾಯಾಲಯದ ಪ್ರಶ್ನಿತ ಆದೇಶವನ್ನು, ಆದ್ದರಿಂದ, ರದ್ದುಪಡಿಸಲಾಗಿದೆ ಮತ್ತು ನ್ಯಾಯಾಧಿಕರಣದ ಆದೇಶವನ್ನು ಪುನಃ ಸ್ಥಾಪಿಸಲಾಗಿದೆ. ಈ ಅಪೀಲನ್ನು ಅದಕ್ಕನುಸಾರವಾಗಿ

*ಅಂಗೀಕರಿಸಲಾಗಿದೆ. ವೆಚ್ಚಗಳಿಗೆ ಸಂಬಂಧಿಸಿದಂತೆ ಆದೇಶಿಸಿಲ್ಲ".*

*(ಒತ್ತು ನೀಡಲಾಗಿದೆ)*

7. ಮೇಲೆ ಉದ್ಧರಿಸಲಾದ ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಹಿನ್ನೆಲೆಯಲ್ಲಿ ಮತ್ತು ಅಪಘಾತದ ದಿನಾಂಕದಂದು ವಿಮೆ ಮಾಡಲಾದ ಮೋಟಾರು ಸೈಕಲ್‌ನ ಸವಾರನು, ಚಾಲನಾ ಪರವಾನಗಿ ಹೊಂದಿರುವುದಿಲ್ಲವೆಂಬುದನ್ನು ತೋರಿಸುವ ಸಾಕ್ಷ್ಯದ ದಾಖಲೆಯಿರುವುದಿಲ್ಲವೆಂಬ ಸಂಗತಿಗೆ ಸಂಬಂಧಪಟ್ಟಂತೆ, ಅಪೀಲುದಾರನ ವಾದವನ್ನು, ಅಂಗೀಕರಿಸಲಾಗದು. ನನ್ನ ಅಭಿಪ್ರಾಯದಲ್ಲಿ, ಅಪೀಲುದಾರರ ನ್ಯಾಯವಾದಿಯು, ವಿಭಾಗೀಯ ಪೀಠದ ತೀರ್ಮಾನದ ಮೇಲೆ ಅವಲಂಬಿಸಿದ್ದು, ಅದರ ಸ್ವಂತ ಸಂಗತಿಗಳ ಮೇಲೆ ನೀಡಿರುವುದಾಗಿದೆ ಮತ್ತು ಅದರಲ್ಲಿ ಯಾವುದೇ ಕಾನೂನನ್ನು ಮಂಡಿಸಿರುವುದಿಲ್ಲ.

8. ಅಪಘಾತದ ದಿನಾಂಕದಂದು ವಿಮೆ ಮಾಡಲಾದ ವಾಹನದ ಚಾಲಕನು, ಚಾಲನಾ ಪರವಾನಗಿ ಹೊಂದಿರುವುದಿಲ್ಲವೆಂಬುದಕ್ಕೆ ಮೊಕದ್ದಮೆಯಷ್ಟರ ಮಟ್ಟಿಗೆ ದಾಖಲೆ ಮೇಲೆ ಸ್ಪಷ್ಟವಾದ ಸಾಕ್ಷ್ಯವಿರಬೇಕು. ಅಪಘಾತದ ದಿನಾಂಕದಂದು ವಿಮೆ ಮಾಡಲಾದ ವಾಹನದ ಚಾಲಕನು, ಚಾಲನಾ ಪರವಾನಗಿ ಹೊಂದಿರುವುದಿಲ್ಲವೆಂದು ಅಭಿಪ್ರಾಯಪಡುವುದಕ್ಕೆ ಪೊಲೀಸ್ ಆರೋಪ ಪಟ್ಟಿಯು ಸಾಕ್ಷ್ಯವಾಗದು.

9. ಮೇಲ್ಕಂಡ ಅಭಿಪ್ರಾಯದ ದೃಷ್ಟಿಯಿಂದ, ನ್ಯಾಯಾಧಿಕರಣದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ನನಗೆ ಯಾವುದೇ ಕಾನೂನು ದುರ್ಬಲತೆ ಕಂಡು ಬರುವುದಿಲ್ಲ. ಈ ಅಪೀಲಿನಲ್ಲಿ ಯಾವುದೇ ಅರ್ಹತೆಯಿಲ್ಲದಿರುವುದರಿಂದ ವಜಾಗೊಳಿಸಲಾಗಿದೆ.

10. ಈ ನ್ಯಾಯಾಲಯದಲ್ಲಿ ಠೇವಣಿಯಿಟ್ಟಿರುವ ಮೊತ್ತವನ್ನು, ನ್ಯಾಯಾಧಿಕರಣಕ್ಕೆ ವರ್ಗಾಯಿಸತಕ್ಕದ್ದು.

ಅಪೀಲನ್ನು ವಜಾಗೊಳಿಸಲಾಗಿದೆ.

---

90